**1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ**

**SC** 7/2025 **PW**-1

**ದಿಃ24.10.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಾದ ಶ್ರೀ ಎಂ ಎ ಡಿ ವಕೀಲರಿಂದ**

ನಾನು ಸುಮಾರು 25 ವರ್ಷಗಳಿಂದ ಹ್ಯಾಂಡಲೂಮ್ ವ್ಯಾಪಾರದಲ್ಲಿ ಭಾಗಿಯಾಗಿರುತ್ತೇನೆ. ಪ್ರತಿವಾದಿಗಳ ಜೊತೆ ನಿಮ್ಮ ವ್ಯಾಪಾರ ಯಾವಾಗನಿಂದ ಇದೆ ಎಂದರೆ ಸಾಕ್ಷಿ ಸುಮಾರು 3-4 ವರ್ಷಗಳಿಂದ ಎನ್ನುತ್ತಾರೆ. ನಾನು 25 ವರ್ಷಗಳಿಂದ ಈ ವ್ಯವಹಾರ ಮಾಡುತ್ತಿದ್ದೇನೆ ಎಂದು ಹೇಳಿದ್ದು ಕ್ರೆಡಿಟ್ ಬೇಸಸ್ ಸರ್ವೆ ಸಾಮಾನ್ಯ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಕ್ರೆಡಿಟ್ based ಎಂದರೆ ಸಾಕ್ಷಿ ಮೊದಲಿಗೆ ಅವರು ಪೋನ ಮೂಲಕ ಆರ್ಡರ್ ಮಾಡುತ್ತಾರೆ, ನಂತರ ನಾವು ಮಾಲು ಕಳುಹಿಸುತ್ತೇವೆ. ಮಾಲಿನ ಜೊತೆಯಲ್ಲಿ ಕ್ರೆಡಿಟ್ ಬಿಲ್ ಕಳುಹಿಸುತ್ತೇವೆ. ಈ ಕೇಸನ ಇನವಾಯ್ಸು ನಂಬರ 85 ಎಂಬುವುದರ ಆರ್ಡರ್ ಯಾವಾಗ ಬಂದಿತ್ತು ಎಂದರೆ ಸಾಕ್ಷಿ ದಿಃ17-04-2024 ರಂದು ಎಂದು ನುಡಿಯುತ್ತಾರೆ. ಪ್ರತಿವಾದಿ ನಿಮಗೆ ಆರ್ಡರ್ ನೀಡಿದ ಬಗ್ಗೆ ನಿಮ್ಮ ಹತ್ತಿರ ಏನಾದರೂ ದಾಖಲೆ ಇದೆಯಾ ಎಂದರೆ ಸಾಕ್ಷಿ ದಾಖಲೆ ಹಾಜರುಪಡಿಸಿಲ್ಲ ಎನ್ನುತ್ತಾರೆ. ಮಾಲನ್ನು ಟ್ರಾನ್ಸಪೋರ್ಟಗೆ ಮಾಡಿದ ಬಗ್ಗೆ ಎನಾದರೂ ದಾಖಲೆ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಹಾಜರುಪಡಿಸಿಲ್ಲ ಎನ್ನುತ್ತಾರೆ. ಟ್ರಾನ್ಸಪೋರ್ಟಗೆ ಹಾಕಿದ ನಂತರ ನಮ್ಮ ಬಳಿ ಒಂದು ದಾಖಲೆ ಇದ್ದು ಅದನ್ನು ತಲುಪಿಸಿದ ನಂತರ ಅವರಿಗೆ ಒಂದು ಕಾಫಿ ಕೊಡಬೇಕೆಂದರೆ ಸಾಕ್ಷಿ ಕೆಲವೊಂದು ಟ್ರಾನ್ಸಪೋರ್ಟನವರು ಕೊಡುತ್ತಾರೆ ಕೆಲವರು ಕೊಡುವುದಿಲ್ಲ ಎನ್ನುತ್ತಾರೆ. ದಿಃ18-04-2024 ರಂದು ನಮ್ಮಿಂದ ಮಾಲು ಡಿಸಪಾಚ್ ಆಗಿದ್ದು ಅವರಿಗೆ ದಿಃ19-04-2024 ರಂದು ಡಿಲೇವರಿ ಆಗಿರುತ್ತದೆ. ಡಿಸಪಾಚ್ ಹಾಗೂ ಡಿಲೇವರಿ ಆದ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ.

ಡಿಸಪ್ಯಾಚ ಹಾಗೂ ಡಿಲೇವರಿ ಮತ್ತು ಆರ್ಡರ್ ಆದ ದಿನಾಂಕಗಳನ್ನು ನನ್ನ ಅರ್ಜಿಯಲ್ಲಾಗಲಿ ಅಥವಾ ಪ್ರಮಾಣ ಪತ್ರದಲ್ಲಾಗಲಿ ನಮೂದು ಮಾಡಿಲ್ಲ ಎಂದರೆ ಸರಿ. ಇನವಾಯ್ಸು ನಂಬರ 85 ಎಂದು ಹೇಳಿದ್ದು ಈ ಪ್ರಕಾರ ಪ್ರತಿವಾದಿ ಯಾವುದೇ ಆರ್ಡರ್ ಮಾಡಿಲ್ಲ ಹಾಗೂ ನಾವು ಸದರಿ ಮಾಲಿನ ಟ್ರಾನ್ಸಪೋರ್ಟ ಕೂಡಾ ಮಾಡಿಲ್ಲ ಅದೇ ರೀತಿ ಅವರಿಗೆ ಡಿಲೇವರಿ ಕೂಡಾ ಆಗಿಲ್ಲವೆಂದರೆ ಸಾಕ್ಷಿ ಅದು ಸರಿ ಅಲ್ಲ ಎನ್ನುತ್ತಾರೆ. ಆ ರೀತಿ ಎನಾದರೂ ಡಿಸಪ್ಯಾಚ ಮಾಡಿದ್ದೆ ಆದರೆ ಅದರ ನಂಬರನ್ನು ನಾನು ನಿಶಾನೆ ಪಿ 1 ರಲ್ಲಿ ನಮೂದು ಮಾಡುತ್ತಿದ್ದೆ ಆದರೆ ನಿಶಾನೆ ಪಿ-1 ರಲ್ಲಿ ಆ ಬಗ್ಗೆ ನಮೂದು ಇರುವುದಿಲ್ಲವೆಂದರೆ ಸಾಕ್ಷಿ ಟ್ರಾನ್ಸಪೋರ್ಟನವರು ನಂಬರ ಕೊಡುವುದಿಲ್ಲ ಎನ್ನುತ್ತಾರೆ. ಡಿಸಪ್ಯಾಚ ಹಾಗೂ ಡಿಲೇವರಿ ಮತ್ತು ಆರ್ಡರ್ ಆಗಿಲ್ಲ ಎಂಬ ಕಾರಣಕ್ಕೆ ಪ್ರತಿವಾದಿಗಳು ನಮಗೆ ಈ ಹಣ ಕೊಡಲು ಬಾಧ್ಯಸ್ಥರು ಅಲ್ಲವೆಂದರೆ ಸಾಕ್ಷಿ ಎಲ್ಲವೂ ಆಗಿದೆ ಎನ್ನುತ್ತಾರೆ.

**ಮರು ವಿಚಾರಣೆಃ ಇಲ್ಲ**

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

**1 ನೇ ಅಧಿಕ ಹಿ.ದಿ.ನ್ಯಾಹುಬ್ಬಳ್ಳಿ**